ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 27.07.2023.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಲ್.ಕೆ.ಎಂ. ವಕೀಲರಿಂದ:**

ದಾವಾ ಸ್ವತ್ತು 2 ಎಕರೆ 20 ಗುಂಟೆ ಇರುತ್ತದೆ. ದಾವಾ ಜಮೀನಿನ ಚೆಕ್‌ಬಂದಿ ಪೂರ್ಣಕ್ಕೆ ಧಾನಾಬಾಯಿ ಮಾನಸಿಂಗ ರಾಠೋಡ ರವರ ಜಮೀನು, ಪಶ್ಚಿಮಕ್ಕೆ ಮುರಳಿ ರವರು ಜಮೀನು ಇರುತ್ತದೆ, ಉತ್ತರಕ್ಕೆ ಘನು ಕೃಷ್ಣ ಪವಾರ ರವರ ಜಮೀನು ಇರುತ್ತದೆ, ದಕ್ಷಿಣಕ್ಕೆ ವಿಠ್ಠಲ್ ರಾವ್ ಪಾಟೀಲ್ ರವರ ಜಮೀನು ಇರುತ್ತದೆ. ಪ್ರತಿವಾದಿ ದಾವಾ ಸ್ವತ್ತು ವಿಠ್ಠಲ್ ರಾವ್ ರವರಿಂದ ಕ್ರಯಕ್ಕೆ ಕೊಂಡಿರುತ್ತಾಳೆ. ಸದರಿ ನೋಂದಣಿ ಕ್ರಯ ಪತ್ರವನ್ನು ನೋಡಿತ್ತೇನೆ ಹಾಗೂ ಪಹಣಿ ನೋಡಿರುತ್ತೇನೆ. ಸದರಿ ಪ್ರತಿವಾದಿ ಕ್ರಯಕ್ಕೆ ಪಡೆದ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

ಪ್ರತಿವಾದಿ ದಾವಾ ಸ್ವತ್ತುನ್ನು ವಿಠ್ಠಲ್ ರಾವ್ ರವರಿಂದ ಖರೀದಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ನೋಂದಣಿ ಕ್ರಯ ಪತ್ರ ನಂ.573 ದಿ: 17.07.1992 ರ ದಾಖಲೆಯನ್ನು ಹಾಜರುಪಡಿಸಿಲ್ಲಾ. ದಾವಾ ಸ್ವತ್ತಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾತುಕತೆ ಊರಲ್ಲಿ ಮದ್ಯಾಹ್ನ 12.00 ರಿಂದ 2.00 ಗಂಟೆಯವರೆಗೆ ಆಗಿರುತ್ತದೆ. ಸದರಿ ಮಾತುಕತೆ ಜನವರಿ 30, 2017 ರಲ್ಲಿ ಆಗಿರುತ್ತದೆ. ಪ್ರತಿವಾದಿ 30 ಜನವರಿ 2017 ರಂದು ಬೇರೆ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲಾ. ಪ್ರತಿವಾದಿ ತನ್ನ ಮಗಳ, ಮಗಳ ಮದುವೆ ಮಾಡಲು ಅವಳಿಗೆ ಹಣದ ಅಡಚಣೆ ಇತ್ತು. ಪ್ರತಿವಾದಿ ಅಳಿಯ ಜೀವಂತ ಇರುತ್ತಾನೆ.

ಸದರಿ ವ್ಯವಹಾರ ರೂ. 5 ಲಕ್ಷಕ್ಕೆ ಆಗಿರುತ್ತದೆ. ಸದರಿ ರೂ.5 ಲಕ್ಷ ಹಣವನ್ನು ಮಾತುಕತೆಯಾದ ದಿನವೇ ಪ್ರತಿವಾದಿಗೆ ಒಂದೇ ಬಾರಿ ಕೊಟ್ಟಿರುತ್ತೇನೆ. ನಿಪಿ-1 ರಲ್ಲಿ ಒಂದೇ

ಬಾರಿ ಹಣ ಕೊಟ್ಟ ಬಗ್ಗೆ ಬರೆದಿರುತ್ತದೆ. ನಿಪಿ-1 ರಲ್ಲಿ ಬೇರೆ-ಬೇರೆ ದಿನಾಂಕದಂದು ಹಣ ಕೊಟ್ಟ ಬಗ್ಗೆ ಬರೆದಿದೆ, ಅದು ಸತ್ಯವೋ ಅಥವಾ ಒಂದೇ ಬಾರಿ ಕೊಟಿದ್ದು ಸತ್ಯವೋ ಎಂದು ಕೇಳಿದ ಪ್ರಶ್ನೇ ಸಾಕ್ಷಿ ಒಂದೇ ಬಾರಿ ಕೊಟ್ಟಿದ್ದು ನಿಜವಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಬೇರೆ-ಬೇರೆ ದಿನಾಂಕಗಳಲ್ಲಿ ಕೊಟ್ಟ ಬಗ್ಗೆ ಬರೆದಿದ್ದು ಸುಳ್ಳು ಇದೆ ಎಂದರೆ ಸರಿ. ಮಾತುಕತೆಯಾದ ನಂತರ ಆಳಂದಗೆ ಬಂದಿರುತ್ತೇವೆ ಅಲ್ಲಿ ಛಾಪಾ ಕಾಗದ ಖರೀದಿಸಿರುತ್ತೇವೆ. ನಂತರ ಮುನಿರ್ ರವರ ಕಡೆ ಹೋಗಿ ನಿಪಿ-1 ನ್ನು ತಯಾರಿಸಿರುತ್ತೇವೆ. ಆ ದಿನ ನೋಂದಣಿ ಕಛೇರಿಗೆ ಹೋಗಿರುವುದಿಲ್ಲ, ಏಕೆಂದರೆ ಸಮಯ ಮುಗಿದು ಹೋಗಿತ್ತು.

ನಿಪಿ-7 ನೋಟೀಸ್ ನಲ್ಲಿ ದಿಃ 30.01.2017 ರಂದು ಮಾತುಕತೆ ಮುಗಿದ ನಂತರ ನೇರವಾಗಿ ಉಪನೋಂದಣಿ ಕಛೇರಿಗೆ ಹೋಗಿದ್ದು, ಅಲ್ಲಿ ನೋಂದಣಿ ಆಗುವುದಿಲ್ಲ ಎಂದು ಹೇಳಿದ ಕಾರಣ ಮುನಿರ್ ರವರ ಬಳಿ ಹೋಗಿ ನಿಪಿ-1 ನ್ನು ಬೆರಳಚ್ಚು ಮಾಡಿಸಿರುತ್ತೇವೆ ಎಂದು ಹೇಳಿದ್ದು ಸುಳ್ಳು ಇದೆ. ನನ್ನ ತಂದೆಯ ತಂದೆಯ ಹೆಸರು ಸೀತಾರಾಮ ಇರುತ್ತದೆ. ಸೀತಾರಾಮ ರವರಿಗೆ ನಾಲ್ಕು ಜನ ಅಣ್ಣ-ತಮ್ಮದಿರು ಇರುತ್ತಾರೆ. ಅವರೆಂದರೇ, ದೇವಲು, ಮೋತಿರಾಮ, ಸೀತಾರಾಮ ಮತ್ತು ರಾಮಚಂದ್ರ ಇರುತ್ತಾರೆ. ರಾಮಚಂದ್ರ ರವರಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ.

ಧನ್ನು ರಾಮಚಂದ್ರ ಮಗ ಇರುತ್ತಾನೆ ಎಂದರೆ ಸರಿ. ಗುಲಾಬ ಧನ್ನು ರವರ ಮಗ ಇರುತ್ತಾನೆ. ಗುಲಾಬ ಮತ್ತು ನನ್ನ ಮದ್ಯ ತುಂಬಾ ಒಳ್ಳೆಯ ಗೆಳೆತನ ಇರುತ್ತದೆ ಎಂದರೆ ಸಾಕ್ಷಿ ನಾನು ಹೆಚ್ಚಾಗಿ ಪುನಾದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಗುಲಾಬ ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಪ್ರತಿ ಮುದ್ದತೆಗೆ ಗುಲಾಬ ನನ್ನ

ಜೊತೆ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿಯಲ್ಲ. ಗುಲಾಬ ಪ್ರತಿವಾದಿ ವಿರುದ್ಧ ಒಂದು ಕೇಸ್‌ನ್ನು ಇದೆ ನ್ಯಾಯಾಲಯದಲ್ಲಿ ಹಾಕಿದ್ದು ನನಗೆ ಮಾಹಿತಿ ಇರುತ್ತದೆ. ಗುಲಾಬ ಏನು ಕೇಸು ಹಾಕಿರುತ್ತಾನೆ ಎಂದು ನನಗೆ ಗೊತ್ತಿಲ್ಲಾ, ಚಾಲ್ತಿ ಇದ್ದ ಬಗ್ಗೆ ಮಾತ್ರ ಗೊತ್ತು, ಸದ್ಯ ಅದು ಮುಗಿದಿರುತ್ತದೆ.

ಪ್ರತಿವಾದಿ ಹೆಸರಿನ ನಮ್ಮ ಗ್ರಾಮದಲ್ಲಿ ಎಷ್ಟು ಜನರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲಾ, ಏಕೆಂದರೆ ನಾನು ಪುನಾದಲ್ಲಿ ಇರುತ್ತೇನೆ. ಪ್ರತಿವಾದಿ ನನಗೆ ಗೊತ್ತಿರುತ್ತಾರೆ, ಅವಳು ನನ್ನ ಚಿಕ್ಕಮ್ಮ ಇರುತ್ತಾರೆ. ಪ್ರತಿವಾದಿಗೆ ಓದು ಬರಹ ಬರುವುದಿಲ್ಲ, ಪ್ರತಿವಾದಿ ಹೆಬ್ಬಟ್ಟಿನ ಸಹಿ ಮಾಡುತ್ತಾರೆ. ನಿಪಿ-9 ರಲ್ಲಿ ಇರುವ ಸಹಿ ಪ್ರತಿವಾದಿಯದು ಇರುವುದಿಲ್ಲ. ನನಗಾಗಲಿ ನನ್ನ ತಂದೆ ಆಗಲಿ ಆಧಾಯ ತೆರಿಗೆ ಪಾವತಿಸುವುದಿಲ್ಲ. ಪ್ರತಿವಾದಿ ನೀಡಿದ ರೂ. 5 ಲಕ್ಷ ಗಳನ್ನು ಬ್ಯಾಂಕಿನಿಂದ ತಂದಿರುವುದಿಲ್ಲ, ಆದರೆ ನಾವು ಕೆಲಸ ಮಾಡುವ ಮಾಲಿಕರಿಂದ ತೆಗೆದುಕೊಂಡು ಕೊಟ್ಟಿರುತ್ತೇವೆ.

ತಲಾ ರೂ.1 ವರೆ ಲಕ್ಷ ಹಣವನ್ನು ನನ್ನ ಇಬ್ಬರು ಸಹೋದರರು ತಮ್ಮ ಮಾಲಿಕರಿಂದ ಪಡೆದುಕೊಂಡು ಬಂದು ಕೊಟ್ಟಿದ್ದು, ಉಳಿದ ರೂ.2 ಲಕ್ಷ ಹಣವನ್ನು ನನ್ನ ಜಮೀನಿನ ಆಧಾಯದಿಂದ ಬಂದಿದ್ದು, ಪ್ರತಿವಾದಿಗೆ ಕೊಟ್ಟಿರುತ್ತೇವೆ. ಸದರಿ ಹಣ ಹೊಂದಿಸಿದ ಬಗ್ಗೆ ದಾವೆಯಲ್ಲಿ ಆಗಲಿ ಅಥವಾ ನನ್ನ ವಕೀಲರಿಗಾಗಲಿ ಅಥವಾ ನಿಪಿ-7 ರಲ್ಲಿ ಆಗಲಿ ಹೇಳಿಲ್ಲಾ. ಪ್ರತಿವಾದಿಗೆ ನಾವು ರೂ. 5 ಲಕ್ಷ ಹಣ ಕೊಡುವ ಸಾಮರ್ಥ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ದಾವಾ ಸ್ವತ್ತುನ್ನು ಯಾವ ರೀತಿಯಾಗಿ ಮತ್ತು ಯಾರ ಸಹಾಯದಿಂದ

ಖರೀದಿಸಿರುತ್ತಾಳೆ ಎಂದು ನನಗೆ ಗೊತ್ತಿಲ್ಲಾ. ಧಾನಬಾಯಿ ನನ್ನ ತಾಯಿ ಆಗಬೇಕು. ದಾವಾ ಸ್ವತ್ತಿನ ಪೂರ್ವಕ್ಕೆ ನನ್ನ ತಾಯಿಯ ಜಮೀನು ಇರುತ್ತದೆ. ನನ್ನ ತಾಯಿ ವಿಠ್ಠಲ್ ರಾವ್ ಪಾಟೀಲ್ ರವರಿಂದ ಖರೀದಿಸಿರುತ್ತಾಳೆ. ನನ್ನ ತಾಯಿ ವಿಠ್ಠಲ್ ರಾವ್ ರವರಿಂದ ಸದರಿ ಜಮೀನು ಖರೀದಿಸುವ ಕಾಲಕ್ಕೆ ಹಣ ಎಲ್ಲಿಂದ ಮತ್ತು ಹೇಗೆ ಪಾವತಿಸಿರುತ್ತಾಳೆ ಎಂದು ನನಗೆ ಗೊತ್ತಿಲ್ಲಾ. ನನ್ನ ತಾಯಿ ಯಾವ ವರ್ಷದಲ್ಲಿ ಹಾಗೂ ಎಷ್ಟು ವರ್ಷಗಳ ಹಿಂದೆ ಮೇಲೆ ಹೇಳಿದ ಜಮೀನನ್ನು ಖರೀದಿಸಿರುತ್ತಾಳೆ ಎಂದು ನನಗೆ ಗೊತ್ತಿರುವುದಿಲ್ಲ.

ನನ್ನ ತಾಯಿ ಖರೀದಿಸಿದ ಜಮೀನಿನ ಕ್ರಯ ಪತ್ರವನ್ನು ನಾನು ನೋಡಿಲ್ಲಾ. ಗುಲಾಬ ರವರು ಪ್ರತಿವಾದಿಯಿಂದ 1 ಎಕರೆ ಜಮೀನನ್ನು ಬೇರೆ ಸರ್ವೆ ನಂಬರನಲ್ಲಿ ಖರೀದಿಸಿದ ಬಗ್ಗೆ ದಾವೆ ಹಾಕಿದ್ದು, ಅದು ಯಾವುದರ ಸಂಬಂಧ ಹಾಕಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2017 ರಲ್ಲಿ ದಾವಾ ಸ್ವತ್ತುನ್ನು ಕ್ರಯ ಪತ್ರ ಮಾಡಿಕೊಡಬೇಕೆಂಬ ನಾವು ಪ್ರತಿವಾದಿಯನ್ನು ಕೇಳಿರುತ್ತೇವೆ. ನಾವು ಸುಮಾರು ಬಾರಿ ಪ್ರತಿವಾದಿಯನ್ನು ಕುರಿತು ಕ್ರಯ ಪತ್ರ ಮಾಡಿಕೊಡು ಎಂದು ಕೇಳಿದ್ದು, ಆದರೆ ಅವರು ಮುಂದೂಡತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನಮಗೆ ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲಾ ಹಾಗೂ ನಮ್ಮಿಂದ ರೂ.5 ಲಕ್ಷ ಹಣವನ್ನು ತೆಗೆದುಕೊಂಡಿಲ್ಲಾ ಎಂದರೆ ಸರಿಯಲ್ಲ. ಅದೇ ರೀತಿ ನಾವು ಪ್ರತಿವಾದಿಯನ್ನು ಕುರಿತು ನೋಂದಣಿ ಕ್ರಯ ಪತ್ರ ಮಾಡಿಕೊಡು ಎಂದು ಸಾಕಷ್ಟು ಬಾರಿ ಕೇಳಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುಲಾಬ ರವರಿಂದ ಪ್ರತಿವಾದಿ ರೂ.1 ಲಕ್ಷ ಕೈಗಡ ಸಾಲ ಪಡೆದುಕೊಂಡಿದ್ದು, ಆ ಕಾರಣ ಪ್ರತಿವಾದಿ ಸದರಿ

ಗುಲಾಬ ರವರಿಗೆ ಒಂದು ಅಡಮಾನ ಪತ್ರ ಮಾಡಿಕೊಟ್ಟಿದ್ದು, ನಾನು ಮತ್ತು ನನ್ನ ತಂದೆ ಸದರಿ ಗುಲಾಬ ಜೊತೆ ಶಾಮಿಲ್ ಆಗಿ ನಿಪಿ-1 ಕರಾರು ಪತ್ರವನ್ನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಿಃ 30.01.2017 ರಂದು ಮಾತುಕತೆ ಆಯಿತು ನಾವು ಆ ದಿನ ಪ್ರತಿವಾದಿಗೆ ರೂ. 5 ಲಕ್ಷ ಹಣ ಪಾವತಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ ನಿಪಿ-1 ರ ದಾಖಲೆಯನ್ನು ನಮಗೆ ಬರೆದುಕೊಟ್ಟಿರುತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 7 ರ ದಾಖಲೆಗಳನ್ನು ನಾನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2017 ರಲ್ಲಿ ದಾವಾ ಸ್ವತ್ತಿನ ಅಕ್ಕ-ಪಕ್ಕ ಜಮೀನಿನ ಮಾರುಕಟ್ಟೆಯ ಬೆಲೆ ನನಗೆ ಗೊತ್ತಿಲ್ಲಾ. 2017 ರಲ್ಲಿ ದಾವಾ ಸ್ವತ್ತಿನ ಬೆಲೆ ಸುಮಾರು ಎಕರೆಗೆ ರೂ.8-10 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ನನ್ನ ಅಭಿಪ್ರಾಯದಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಕರೆಗೆ ರೂ. 2 ಲಕ್ಷ ಇತ್ತು.

ಎಸ್ಸಿ ಎಸ್‌ಟಿ ಬೋರ್ಡ್‌ನ ಸಹಾಯದಿಂದ ನನ್ನ ತಾಯಿ ಮತ್ತು ಪ್ರತಿವಾದಿ ಇಬ್ಬರು ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸದರಿ ಜಮೀನುಗಳು ಎಸ್ಸಿ ಎಸ್‌ಟಿ ಬೋರ್ಡ್‌ನ ಹೆಸರಿನಲ್ಲಿ ಅಡಮಾನವಾಗಿರುತ್ತವೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸದರಿ ಎಸ್ಸಿ ಎಸ್‌ಟಿ ಬೋರ್ಡ್ ರವರಿಗೆ ನನ್ನ ತಾಯಿ ಆಗಲಿ ಪ್ರತಿವಾದಿ ಆಗಲಿ ಸಾಲ ಮರುಪಾವತಿ ಮಾಡಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ನನ್ನ ತಾಯಿ ಆಗಲಿ ಹಾಗೂ ಪ್ರತಿವಾದಿ ಆಗಲಿ ಸದರಿ ಜಮೀನುಗಳನ್ನು ಮಾರಾಟ ಮಾಡುವುದು ಕಾನೂನಿನ ಪ್ರಕಾರ ಬರುವುದಿಲ್ಲ ಎಂದರೆ ಸರಿಯಲ್ಲ.

ಪಿಡಬ್ಲ್ಯೂ: 02

ನಾನು ಸದರಿ ಗುಲಾಬ ರವರ ಜೊತೆ ಶಾಮಿಲ್ ಆಗಿ ನಿಪಿ-1 ನ್ನು ಸೃಷ್ಠಿಸಿಕೊಂಡು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಎಲ್ಲಾ ದಾಖಲೆಗಳನ್ನು ಸೃಷ್ಠಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**